ಹಣೆಬರಹದೊಂದಿಗೆ ಯುದ್ಧ ಮಾಡಲೇ? ನೇರವಾಗಿ ಸಾಗುತ್ತಿರುವ ಬದುಕನ್ನು ಹಳಿತಪ್ಪಿಸುತ್ತಿರುವ ದುರದೃಷ್ಟದೊಂದಿಗೆ ಹೋರಾಡಲೇ? ಎಂದು ಚಿಂತಿಸುತ್ತಾ ಕುಳಿತಿರಬೇಕಾದರೆ, ಮಗಳು ನಿದ್ದೆಯಲ್ಲಿ ಕಟಕಟನೆ ಹಲ್ಲುಕಡಿಯಲು ಶುರುಮಾಡಿದಳು. ಏನೇನೋ ಅಸ್ಪಷ್ಟವಾಗಿ ಬಡಬಡಿಸತೊಡಗಿದಳು.

ಯಾರನ್ನೋ ಬೈಯುತ್ತಿದ್ದಾಳೆಂದು ಗೊತ್ತಾಯಿತು. ರಾತ್ರಿಯ ನೀರವತೆಯಲ್ಲೂ ರಂಗಮ್ಮನಿಗೆ ಮಗಳು ಬಳಸುತ್ತಿರುವ ಬೈಗುಳಗಳು ತಾನು ನಿತ್ಯ ಬಳಸುವ ಪದಗಳು ಎಂದು ತಿಳಿದು ಆಶ್ಚರ್ಯವಾಯಿತು. ಏಕೆಂದರೆ ತಾನು ಬಳಸುವ ಭಾಷೆ ಮತ್ತು ಬೈಗುಳದ ಪದಗಳನ್ನು ಯಾವತ್ತೂ ವಿರೋಧಿಸುತ್ತಿದ್ದ ಮಗಳು, ಈಗ ತಾನೇ ಅಂತಹ ಪದಗಳನ್ನು ಬಳಸುತ್ತಿದ್ದಾಳಲ್ಲ ಎಂದು ರಂಗಮ್ಮನಿಗೆ ಆಶ್ಚರ್ಯವಾಯಿತು. ಅವಳ ಮಾತುಗಳೆಲ್ಲಾ ನಿದ್ರೆಯ ಮಂಪರಿನಲ್ಲಿ ಬರುತ್ತಿದ್ದರಿಂದ ಅಷ್ಟು ಸ್ಪಷ್ಟವಾಗಿರಲಿಲ್ಲ. ಸ್ವಲ್ಪ ಹೊತ್ತು ನಿದ್ರೆಯಲ್ಲೇ ಬೈದು, ನಂತರ ಎಂದಿನಂತೆ ಎದ್ದ ಸೌಮ್ಯ ಬಟ್ಟೆಗಳನ್ನು ಬಿಚ್ಚಿ, ಇರುವೆಗಳನ್ನು ಕೊಡವತೊಡಗಿದಳು. ರಂಗಮ್ಮ ಮಗಳ ಭುಜ ಹಿಡಿದು ಅಲ್ಲಾಡಿಸಿ, ಮಗಳನ್ನು ಎಚ್ಚರಗೊಳಿಸಿದಳು. ಪಿಳಿಪಿಳಿ ಕಣ್ಣುಬಿಟ್ಟು ನಿದ್ರೆಯಿಂದ ಎಚ್ಚರಗೊಂಡ ಸೌಮ್ಯಳಿಗೆ, 'ಏನಾದ್ರೂ ಕನಸು ಕಂಡ್ಯಾ? ನಿದ್ದೆಯಲ್ಲಿ ಯಾರಿಗೋ ಬೈತಾ ಇದ್ದೆಯಲ್ಲಾ? ಏನ್ ಕನಸು ನಂಗೂ ಹೇಳು?' ಎಂದಳು. ನಿದ್ರೆಯಿಂದ ಪೂರ್ಣ ಎಚ್ಚರಗೊಂಡ ಸೌಮ್ಯ ತನಗೆ ಬಿದ್ದ ಕನಸನ್ನು ಹೇಳತೊಡಗಿದಳು:

'ಕನಸಿನಲ್ಲಿ ನಾನು ಸ್ಕೂಲಿಗೆ ಹೋಗಲು ಬಸ್ಸಿನಲ್ಲಿದ್ದೆ. ಆಗ ಯಾರೋ ಒಬ್ಬ ಗಂಡಸು ನನ್ನ ಬೆನ್ನ ಹಿಂದೆ ನಂಗೆ ಒತ್ತಿಕೊಂಡು ನಿಂತು, ಕಿವಿಯಲ್ಲಿ ಏನೋ ಪಿಸಪಿಸ ಹೇಳಿದಂತಾಯ್ತು. ಅವನು ಏನು ಮಾಟಮಾಡಿದನೋ ಗೊತ್ತಿಲ್ಲಾ, ಆದರೆ ನಂಗೆ ಮೈಮೇಲೆ ಪೂರ್ತಿ ಪ್ರಜ್ಞೆ ಇರಲಿಲ್ಲ. ಆಮೇಲೆ ಅವನು ತನ್ನ ಕೈಯಿಂದ ನನ್ನ ಮೈಮೇಲೆಲ್ಲಾ ಇರುವೆಗಳನ್ನು ಬಿಡ್ತಾನೆ. ಆ ಇರುವೆಗಳೆಲ್ಲಾ ಒಟ್ಟಾಗ್ತಾ ಒಟ್ಟಾಗ್ತಾ ಹಾವಿನ ರೂಪ ತಾಳುತ್ತೆ. ಅದು ಅಂತಿಂಥ ಹಾವಲ್ಲ, ವಿಷಸರ್ಪ. ಅದು ನನ್ನ ಮೈಮೇಲೆಲ್ಲಾ ಹರಿದಾಡುತ್ತಾ, ನನ್ನನ್ನು ಗಟ್ಟಿಯಾಗಿ ಬಿಗಿಯುತ್ತಾ, ನನಗೆ ಉಸಿರಾಡಲಾಗದೇ ಪ್ರಜ್ಞೆ ಹೋದಂಗೆ ಆಯಿತು. ಇರುವೆಗಳನ್ನೆಲ್ಲಾ ಕೊಡವದಿದ್ದರೆ ಅವು ಒಂದಕ್ಕೊಂದು ಸೇರಿಕೊಳ್ಳುತ್ತಾ, ಸೇರಿಕೊಳ್ಳುತ್ತಾ ನಂತರ ಹಾವಾಗುತ್ತೆ. ನಂಗೆ ದಿನವೂ ಇದೇ ರೀತಿ ಕನಸು ಬೀಳುತ್ತೆ.'

ಸೌಮ್ಯಳ ಧ್ವನಿ ನಡುಗುತ್ತಿತ್ತು.

'ನಿಜವಾಗ್ಲು ಬಸ್ಸಿನಲ್ಲೂ ನಿಂಗೆ ಹಿಂಗೇ ಆಗಿತ್ತಾ? ಅದುಕ್ಕೇನಾ ನೀನು ಅವತ್ತು ಬಸ್ಸಲ್ಲಿ ಗ್ಯಾನತಪ್ಪಿ ಬಿದ್ದದ್ದು?' ಎಂದು ರಂಗಮ್ಮ ಅಚಾನಕ್ಕಾಗಿ ಕೇಳಿದಳು. 'ಹೌದು' ಎಂದು ಹೇಳಿ ಸೌಮ್ಯ ಮೌನವಾದಳು.

'ಬಸ್ಸಲ್ಲಿ ನಿಜವಾಗ್ಲೂ ನಿಂಗೆ ಹಿಂಗೆ ಆದಾಗ ಯಾರವನು ಎಂದು ತಿರುಗಿ ಅವನ ಮುಖ ನೋಡಿಲ್ವಾ?' ಎಂದು ಕೇಳಿದಳು ರಂಗಮ್ಮ. 'ಬಸ್ಸಲ್ಲಿ ಅವನು ಅದ್ಯಾವ ಮಾಯದಲ್ಲಿ ನನ್ನ ಹಿಂದೆ ಬಂದು ನಿಂತ್ಕೋತಾನೋ ಗೊತ್ತಿಲ್ಲ. ಹಿಂದೆ ತಿರುಗಿ ನೋಡೋಕೆ ಪ್ರಯತ್ನ ಮಾಡಿದ್ದೀನಿ. ಆದರೆ ಅವನು ಕಿವಿಯ ಹತ್ತಿರ ಎಂತದ್ದೋ ಹೇಳಿದ ಮೇಲೆ ನನಗೆ ಪೂರ್ತಿ ಎಚ್ಚರ ಇರೋದಿಲ್ಲ. ನಂತರ ನಂಗೆ ಎಚ್ಚರ ಬಂದಾಗ ಸ್ಕೂಲ್ ಬಂದಿರ್ತದೆ, ಇಳ್ಕೋತಿನಿ. ಅವನು ಯಾರೂ ಅಂತ ಇದುವರೆಗೆ ನೋಡ್ಲಿಕ್ಕೆ ಆಗಿಲ್ಲ. ಅದಕ್ಕೆ ನಂಗೆ ಸ್ಕೂಲಿಗೆ ಹೋಗೋಕೆ ಈಗ್ಲೂ ಭಯ ಆಗ್ತದೆ' ಎಂದಳು ಸೌಮ್ಯ ಅಳುತ್ತಾ.

'ನಂಗ್ಯಾಕೆ ಇಷ್ಟು ದಿನ ನೀನು ಬೊಗಳಲಿಲ್ಲ. ಆ ಮಿಂಡ್ರಿಗುಟ್ಟಿದ ಸೂಳೆಮಗನ್ನ ನಾಳೆ ಹಿಡಿದು ಬಸ್ಸಲ್ಲೇ ಕೊಚ್ಚಿಹಾಕ್ತೀನಿ. ಬಟ್ಟೆ ಬಿಚ್ಚಿ ಊರ ಮುಂದೆ ನಿಲ್ಲಿಸ್ತೀನಿ. ನನ್ನ ಮಗಳ ಜೀವನದ ಜೊತೆ ಯಾರೇ ಆಟ ಆಡಿದ್ರೂ ಅವರನ್ನ ಸುಮ್ನೇ ಬಿಡಾಕಿಲ್ಲ. ಆ ಲೌಡಿಮಗ ಏನು ಅದ್ಕೊಂಡವ್ನೆ ನನ್ನ? ಈ ಕತ್ತಾಳೆ ತಂಟೆಗೆ ಬಂದೋರ್ನ ಅಡ್ಡಡ್ಡ ಸೀಳಿಬಿಡ್ತೀನಿ' ಎಂದು ರಂಗಮ್ಮ ಚಂಡಿಯಾದಳು.

ರಂಗಮ್ಮನಿಗೆ ಸಿಟ್ಟು ಬಂದರೆ, ಜಗಳದ ಮೂಡಿಗೆ ಹೋದರೆ ಕತ್ತಾಳೆ ಎಂದು ತನ್ನನ್ನು ತಾನು ಕರೆದುಕೊಳ್ಳುತ್ತಿದ್ದಳು. ವೈರಿಗಳಿಗೆ ಬುದ್ಧಿಕಲಿಸುವ ಸಂದರ್ಭಗಳಲ್ಲಿ ದೇವಿಯು ಚಾಮುಂಡಿಯಾಗುವಂತೆ, ರಂಗಮ್ಮನು ಕತ್ತಾಳೆಯಾಗಿ ರೂಪಾಂತರಗೊಳ್ಳುತ್ತಿದ್ದಳು.

'ನಾನು ಅದಕ್ಕೇ ನಿಂಗೆ ಇದನ್ನು ಹೇಳ್ಲಿರ್ಲಿಲ್ಲ. ನೀನು ಊರಲ್ಲಿ ಎಲ್ಲರ ಮುಂದೆ ಈ ವಿಷಯವನ್ನು ಎತ್ತಿ ರಗಳೆ ಮಾಡಿದರೆ ನನ್ನ ಮಾನ, ಮರ್ಯಾದೇನೇ ತಾನೇ